ವರ್ಷಗಳಿಂದ ಕ್ಷ-ಕಿರಣ ಯಂತ್ರದ ವ್ಯವಸ್ಥೆ ಇರುವುದಿಲ್ಲ. ಈ ಯಂತ್ರವು ಬಹಳ ಹಳೆಯದಾಗಿದ್ದು ಇದಕ್ಕೆ ಬೇಕಾಗುವ ಬಿಡಿ ಭಾಗಗಳು ಮೂಲ ಸರಬರಾಜುದಾರರಿಂದಲೂ ಹಾಗೂ ಮಾರುಕಟ್ಟೆಯಲ್ಲಿ ಲಭ್ಯವಿಲ್ಲದ ಕಾರಣದಿಂದ ದುರಸ್ತಿ ಮಾಡಲು ಸಾಧ್ಯವಾಗಲಿಲ್ಲ.

ಆ) ಹೊಸ ಕ್ಷ-ಕಿರಣ ಯಂತ್ರವನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗಿದೆ.

ವಿಷಯ:- ಮೂಡುಶೆಡ್ಡೆ (ಮಂಗಳೂರು ದ.ಕ) ಸರ್ಕಾರಿ ಕ್ಷಯ ರೋಗ ಆಸ್ಪತ್ರೆಗೆ ನೂತನ ಕಟ್ಟಡ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 454 (927)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡುಶೆಡ್ಡೆ (ಮಂಗಳೂರು ದಕ್ಷಿಣ ಕನ್ನಡ) ಸರ್ಕಾರಿ ಆಸ್ಪತ್ರೆಯ ನೂತನ ಕಟ್ಟಡವು ನಿರ್ಮಾಣಗೊಂಡಿದ್ದರೂ ಇನ್ನೂ ಕಾರ್ಯಾರಂಭವಾಗದೇ ಇರಲು ಕಾರಣಗಳೇನು, ಹಾಗೂ ಎಂದು ಕಾರ್ಯಾರಂಭವಾಗುವುದು.

ಆ) ಸದರಿ ಆಸ್ಪತ್ರೆಯ ಕಟ್ಟಡಕ್ಕೆ ತಗುಲಿದ ಒಟ್ಟು ವೆಚ್ಚವೆಷ್ಟು, ಅದನ್ನು ಆಸ್ಪತ್ರೆಯ ಉದ್ದೇಶಕ್ಕಾಗಿ ಸ್ವಾಧೀನಕ್ಕೆ ಇನ್ನೂ ತೆಗೆದುಕೊಳ್ಳದೇ ಇರುವುದರಿಂದಾಗಿ ಉಂಟಾಗಿರುವ ಅನಾನುಕೂಲತೆ ಹಾಗೂ ನಷ್ಟ ಸರ್ಕಾರದ ಗಮನಕ್ಕೆ ಬಂದಿದೆಯೇ?

ಡಾ॥ ಹೆಚ್.ಸಿ.ಮಹದೇವಪ್ಪ (ಮಾನ್ಯ ಆರೋಗ್ಯ ಸಚಿವರು):-

ಅ) ಮೂಡುಶೆಡ್ಡೆ ಸರ್ಕಾರಿ ಆಸ್ಪತ್ರೆಯ ನೂತನ ಕಟ್ಟಡವು ಇನ್ನೂ ಪೂರ್ಣಗೊಂಡಿಲ್ಲ. ಕಟ್ಟಡವು ಎಲ್ಲಾ ರೀತಿಯಲ್ಲಿ ಪೂರ್ಣಗೊಂಡ ನಂತರ ಮತ್ತು ಅದಕ್ಕೆ ಸಂಬಂದಿಸಿದಂತೆ ಸಿಬ್ಬಂದಿಗೆ ಮಂಜೂರಾತಿ ನೀಡಿದ ನಂತರ ಕಾರ್ಯಾರಂಭವಾಗುವುದು.

ಆ) ಸದರಿ ಆಸ್ಪತ್ರೆಯ ಕಟ್ಟಡಕ್ಕೆ ಇಲ್ಲಿಯವರೆಗೆ ತಗುಲಿರುವ ವೆಚ್ಚ ರೂ. 29, 15, 986.00 ಕಟ್ಟಡವು ಎಲ್ಲಾ ರೀತಿಯಲ್ಲೂ ಪೂರ್ಣಗೊಳ್ಳದೇ ಇರುವುದರಿಂದ ಆಸ್ಪತ್ರೆಯನ್ನು ಸ್ವಾಧೀನಕ್ಕಾಗಿ ತೆಗೆದುಕೊಂಡಿರುವುದಿಲ್ಲ.

ವಿಷಯ:- ರಾಜ್ಯದಲ್ಲಿ ಇತ್ತೀಚಿಗೆ ಶಾಶ್ವತ ಅನುದಾನರಹಿತ ಪ್ರೌಢಶಾಲೆಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :455 (251)

ಡಾ.ಎಂ.ಬಿ.ಕರ್ಕಿ (ಕುಮಟಾ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇತ್ತೀಚೆಗೆ ಶಾಶ್ವತ ಅನುದಾನರಹಿತ ಷರತ್ತಿನ ಮೇಲೆ ಪ್ರಾರಂಭವಾಗಿರುವ ಪ್ರೌಢ ಶಾಲೆಗಳ ಮತ್ತು ಕಾಲೇಜುಗಳ ಸಂಖ್ಯೆ ಎಷ್ಟು?

ಆ) ಇಂತಹ ಪ್ರೌಢಶಾಲೆಗಳು ಶಾಲಾ ನಕ್ಷೆಯ ಪ್ರಕಾರ ಇದ್ದಲ್ಲಿ ಸರ್ಕಾರವು ಅನುದಾನ ನೀಡುವ ಬಗ್ಗೆಪುನರ್ ಪರಿಶೀಲಿಸುವುದೇ?

ಇ) ಇಲ್ಲವಾದಲ್ಲಿ ಅಂತಹ ಶಾಲೆಗಳನ್ನು ಮುಚ್ಚಿದ ಸ್ಥಳಗಳಲ್ಲಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡುವುದು ಸರ್ಕಾರದ ಜವಾಬ್ದಾರಿಯಲ್ಲವೇ?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):-

ಅ) ಪದವಿ ಪೂರ್ವ ಕಾಲೇಜು - 596

ಪ್ರೌಢಶಾಲೆ - 2801

ಆ) ಇಲ್ಲ.

ಇ) ಅಗತ್ಯವಿರುವ ಸ್ಥಳಗಳಲ್ಲಿ ಶಾಲೆಗಳನ್ನು ಪ್ರಾರಂಭಿಸಲಾಗುವುದು.

ವಿಷಯ:- ಹೊನ್ನಾವರ ತಾಲ್ಲೂಕಿನ ನೀಲಗಿರಿ ತೋಪಿನ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 456 (718)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ):- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾವರ ತಾಲ್ಲೂಕು ಗುಣವಂತೆ ಗ್ರಾಮದ ಮುಗಳಿ ಊರಿಗೆ ಹೋಗುವ ದಾರಿಯಲ್ಲಿ ಸಿಗುವ ಅರಣ್ಯ ಇಲಾಖೆಯ 'ನೀಲಗಿರಿ ತೋಪ'ನ್ನು ಸಾರ್ವಜನಿಕರು ಲೂಟಿ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಅರಣ್ಯ ಇಲಾಖೆಯವರು ಈವರೆಗೆ ಒಟ್ಟು ಎಷ್ಟು ಪ್ರಕರಣಗಳನ್ನು ದಾಖಲು ಮಾಡಿಕೊಂಡಿದೆ;

ಇ) ಇದನ್ನು ತಡೆಯುವಲ್ಲಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು):-

ಅ) ಹೊನ್ನಾವರ ಪಲಯದ ಕಾಸರಗೋಡ್ ಗಸ್ತಿನಲ್ಲಿ ನೀಲಗಿರಿ ನೆಡುತೋಪು ಇರುವುದಿಲ್ಲ. ಆದರೆ ಮುಗಳಿ ಹತ್ತಿರ ಅತಿ ಹೆಚ್ಚು ಜನರು ಅಕ್ರಮವಾಗಿ ಕಳ್ಳಭಟ್ಟಿ ಇಳಿಸುವ ಕಾರ್ಯನಿರ್ವಹಿಸುತ್ತಿದ್ದುದು ತಿಳಿದು ಬಂದಿದ್ದು ಸದ್ರಿ ಪ್ರದೇಶದ ಸುತ್ತಲೂ ಇಲಾಖಾ ವತಿಯಿಂದ ಬೆಳೆಯಿಸಿದ ಅಕೇಶಿಯಾ ನೆಡುತೋಪಿನಿಂದ ಗಿಡಗಳನ್ನು ಸೌದೆಗಾಗಿ ಕಡಿಯುವುದು ಗಮನಕ್ಕೆ ಬಂದಿರುತ್ತದೆ.